ಶ್ರೀ ಎನ್. ಯೋಗೀಶ್ವರ ಭಟ್ : ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿ ಒಂದು ಯುನಿಟ್‌ಗೆ 60 ಸಾವಿರ ರೂಪಾಯಿಗಳನ್ನು ಕೊಡುತ್ತಾರೆ. ಮಂಗಳೂರಿನಂತಹ ನಗರ ಪ್ರದೇಶಗಳಲ್ಲಿಯೂ ಕೂಡ ಅದನ್ನು 60 ಸಾವಿರ ರೂಪಾಯಿಗಳೆಂದು ಮಾಡುವ ಒಂದು ಶಿಫಾರಸ್ಸು ತಮ್ಮ ಕಡೆಯಿಂದ ಮಾಡಬೇಕಾಗಿದೆ. ಏಕೆಂದರೆ ಮನೆ ಕಟ್ಟುವ ಖರ್ಚು ಬರುವಂತಾದ್ದು ಒಂದೇ ಲೆಕ್ಕ. ಬೆಂಗಳೂರಿಗೆ 60 ಸಾವಿರ, ಮಂಗಳೂರಿಗೆ 40 ಸಾವಿರ ಎಂದು ಹೇಳುವಂಥಾದ್ದು ಸರಿಯಲ್ಲ. ಇದನ್ನು ತಾವು ಸರಿಪಡಿಸಬೇಕು, ಈ ನಿಟ್ಟಿನಲ್ಲಿ ಏನು ಶಿಫಾರಸ್ಸನ್ನು ನಮ್ಮ ಕಡೆಯಿಂದ ಕೇಂದ್ರ ಸರ್ಕಾರಕ್ಕೆ ಮಾಡಬೇಕೋ ಆ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಬೇಕು, ತಮ್ಮ ಕಡೆಯಿಂದಲೂ ಸಹ ಸಹಾಯ ಮಾಡುವ ನಿಟ್ಟಿನಲ್ಲಿ ಯೋಜನೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಈ ಕ್ಲಾಸಿಫಿಕೇಶನ್ ಆಫ್ ಸಿಟೀಸ್ ಎಂದು ಏನು ನಾವು ಹೇಳುತ್ತೇವೆ ಆ ಕ್ಲಾಸಿಫಿಕೇಶನ್ ಪ್ರಕಾರ ಜನಸಂಖ್ಯೆಗೆ ಅನುಗುಣವಾಗಿ ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಕೇಂದ್ರ ಸರ್ಕಾರದವರೇ 60 ಸಾವಿರ ರೂಪಾಯಿಗಳು ನೀಡುವಂತಹ ಒಂದು ತೀರ್ಮಾನವನ್ನು ತೆಗೆದುಕೊಂಡಿರುವುದರಿಂದ ಉಳಿದ ನಗರಪ್ರದೇಶಗಳಲ್ಲೂ ಬೇಡಿಕೆ ಬಂದಂತೆ ಇದು ಅನ್ವಯಿಸಬೇಕು ಎನ್ನುವ ಬಗ್ಗೆ ಕೇಂದ್ರ ಸರ್ಕಾರದವರ ಜೊತೆ ಚರ್ಚೆ ಮಾಡುವುದಕ್ಕೆ ಒಂದು ಪ್ರಸ್ತಾವನೆಯನ್ನು ಕಳುಹಿಸುವುದಕ್ಕೆ ನಾನು ಸಿದ್ಧನಾಗಿದ್ದೇನೆ. ಈ ವಿಚಾರವನ್ನು ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುತ್ತಿದ್ದೇನೆ.

ಹುಲಸೂರು ಮತಕ್ಷೇತ್ರದಲ್ಲಿ ನಿರ್ಮಿಸಲಾಗಿರುವ ಹೊಸ ರಸ್ತೆ ಮತ್ತು ಸೇತುವೆಗಳು

44(429) - ಶ್ರೀ ರಾಜೇಂದ್ರ ವರ್ಮ (ಹುಲ್‌ಸೂರ್) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

1) ಹುಲಸೂರು ಮತಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಜಿಲ್ಲಾ ಪಂಚಾಯತಿ ವತಿಯಿಂದ ಎಷ್ಟು ಕಿ.ಮೀ. ಹೊಸ ರಸ್ತೆ ಹಾಗೂ ಸೇತುವೆಗಳನ್ನು ನಿರ್ಮಿಸಲಾಗಿದೆ; (ಗ್ರಾಮವಾರು ವಿವರಗಳನ್ನು ಒದಗಿಸುವುದು);

2) ಮೇಲ್ಕಂಡ ಅವಧಿಯಲ್ಲಿ ಸದರಿ ಕಾಮಗಾರಿಗಳಿಗಾಗಿ ಪ್ರತಿ ವರ್ಷ ವೆಚ್ಚ ಮಾಡಲಾದ ಹಣವೆಷ್ಟು;

3) ಸದರಿ ಕ್ಷೇತ್ರದಲ್ಲಿ ಪ್ರಸಕ್ತ ಸಾಲಿನಲ್ಲಿ ಎಷ್ಟು ಕಿ.ಮೀ. ಹೊಸರಸ್ತೆ ಹಾಗೂ ಸೇತುವೆಗಳನ್ನು ನಿರ್ಮಿಸಲಾಗುತ್ತದು; ಇದಕ್ಕಾಗಿ ವೆಚ್ಚ ಮಾಡಲಾಗಿರುವ ಹಣವೆಷ್ಟು; (ಗ್ರಾಮವಾರು ವಿವರಗಳನ್ನು ಒದಗಿಸುವುದು)

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

1) ಕಳೆದ 3 ವರ್ಷಗಳ ಅವಧಿಯಲ್ಲಿ ಹುಲಸೂರು ಮತಕ್ಷೇತ್ರದ ವ್ಯಾಪ್ತಿಯಲ್ಲಿ 14.99 ಕಿ.ಮೀ. ಹೊಸ ರಸ್ತೆ ನಿರ್ಮಾಣ ಮಾಡಲಾಗಿದೆ. ಹಾಗೂ 5 ಅಡ್ಡಗಾಲುವೆಗಳನ್ನು ನಿರ್ಮಾಣ ಮಾಡಲಾಗಿದೆ. ಗ್ರಾಮವಾರು ವಿವರಗಳನ್ನು ಅನುಬಂಧ-1 ಮತ್ತು 2ರಲ್ಲಿ ನೀಡಲಾಗಿದೆ.

2) 1999-2000 ನೇ ಸಾಲಿನಲ್ಲಿ ರೂ. 3.00 ಲಕ್ಷ 2001-2002ನೇ ಸಾಲಿನಲ್ಲಿ ರೂ. 14.75 ಲಕ್ಷ ಹಾಗೂ 2002-2003ನೇ ಸಾಲಿನಲ್ಲಿ ರೂ. 9.75 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

3) ಪ್ರಸಕ್ತ ಸಾಲಿನಲ್ಲಿ 5.65 ಕಿ.ಮೀ. ಹೊಸ ರಸ್ತೆ ನಿರ್ಮಾಣ ಹಾಗೂ ಎರಡು ಅಡ್ಡಗಾಲುವೆ ನಿರ್ಮಾಣ ಕಾಮಗಾರಿ ಕೈಗೊಳ್ಳುವ ಗುರಿ ಇದ್ದು ಇವುಗಳ ಅಂದಾಜು ಮೊತ್ತ ರೂ. 16.50 ಲಕ್ಷ ಇರುತ್ತದೆ. ಈಗಾಗಲೇ 5.65 ಕಿ.ಮೀ. ಹೊಸ ರಸ್ತೆ ನಿರ್ಮಾಣ ಹಾಗೂ ಎರಡು ಅಡ್ಡಗಾಲುವೆಗಳಿಗೆ ರೂ. 975 ಲಕ್ಷ ವೆಚ್ಚ ಮಾಡಲಾಗಿದೆ. ಗ್ರಾಮವಾರು ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.

ಅನುಬಂಧ - 1

ಕ್ರ.ಸಂ.	ಕೆಲಸದ ಹೆಸರು	ಅಂದಾಜು ಪಟ್ಟಿ (ರೂ. ಲಕ್ಷಗಳಲ್ಲಿ)	ಖರ್ಚಾದ ಹಣ	ನಿರ್ಮಾಣಗೊಂಡ ಹೊಸ ರಸ್ತೆಗಳು (ಕಿ.ಮೀ.ಗಳಲ್ಲಿ)
	1999-2000			
1.	ಬರದಾಪೂರ ಗ್ರಾಮದಿಂದ ಡಾವರಗಾಂವ್ ಗ್ರಾಮದ ರಸ್ತೆ ನಿರ್ಮಾಣ	3.00	3.00	1.52
	ಒಟ್ಟು	3.00	3.00	1.52
	2001-2002			
1.	ಸಾಯಗಾಂವ್ ಗ್ರಾಮದ ಒಳರಸ್ತೆ ನಿರ್ಮಾಣ	3.00	3.00	1.20
2.	ಕಬೀರಾಬಾದ ವಾಡಿಗೆ ಕೊಡು ರಸ್ತೆ ನಿರ್ಮಾಣ	3.00	3.00	0.50
3.	ಬೆಲೂರಾ ಗ್ರಾಮದಿಂದ ಖಂಡಾಲಾ ಗ್ರಾಮದ ರಸ್ತೆ ನಿರ್ಮಾಣ	1.00	1.00	1.68
4.	ಅಂತರ ಭಾರತಿ ತಾಂಡಾದ ರಸ್ತೆಯನ್ನು ನಾಂದೇಡ ಬೀದರ ಮುಖ್ಯ ರಸ್ತೆಗೆ ಜೋಡಿಸುವದು	0.50	0.50	0.25
5.	ಗುತ್ತಿ ಗ್ರಾಮದಲ್ಲಿ ಗ್ರಾಮದಿಂದ ಗುತ್ತಿ ದೇವಸ್ಥಾನದವರೆಗೆ ರಸ್ತೆ ನಿರ್ಮಾಣ	0.50	0.50	0.50
6.	ಗೋರ್ಟಾ ಗ್ರಾಮದಿಂದ ಘಾಟ ಬೋರಾಳ ಗ್ರಾಮಾದ ರಸ್ತೆ ನಿರ್ಮಾಣ	1.00	1.00	0.57
7.	ವಡ್ಡನಕೇರಾ ಗ್ರಾಮದಿಂದ ನಿಂಬೂರಾ ಗ್ರಾಮದವರೆಗೆ ರಸ್ತೆ ನಿರ್ಮಾಣ	1.00	1.00	0.55

1	2	3	4	5
8.	ಠಕ್ಕರಗಂಜವಾಡಿ ಗ್ರಾಮದಿಂದ ಹಿಲಾಲಪುರ ಹಳ್ಳಿಖೇಡ (ಬಿ) ಗ್ರಾಮಕ್ಕೆ ಕೂಡು ರಸ್ತೆ ನಿರ್ಮಾಣ	1.00	1.00	0.70
9.	ಘಾಟದೋರಾಳ ಗ್ರಾಮದಿಂದ ಗಡಿರಾಯಪಳ್ಳಿ ಗ್ರಾಮದ ರಸ್ತೆ ನಿರ್ಮಾಣ	1.00	1.00	0.50
10.	ಶ್ರೀಮಾಳಿ ಗ್ರಾಮದಿಂದ ಕೊಂಗಳಿ ಗಾಮದ ರಸ್ತೆ ನಿರ್ಮಾಣ	1.00	1.00	0.30
11.	ಜಮಖಿಂಡಿ ಗ್ರಾಮದಿಂದ ಔರಾದ (ಎಸ್) ಗ್ರಾಮದ ರಸ್ತೆ ನಿರ್ಮಾಣ	0.25	0.25	0.17
12.	ಮಂಜರಖೇಡ ಗ್ರಾಮದಿಂದ ಹಲಸಿಮಗಾಂವ ಗ್ರಾಮದ ರಸ್ತೆ ನಿರ್ಮಾಣ	0.50	0.50	0.40
13.	ಮಾಸಿಮಾಡ ಗ್ರಾಮದಿಂದ ದರ್ಗಾದ ವರೆಗೆ ರಸ್ತೆ ನಿರ್ಮಾಣ	1.00	1.00	0.50
	ಒಟ್ಟು	14.75	14.75	7.82
	ಅಡ್ಡಗಾಲುವೆ ಸಂ			ಅಡ್ಡಗಾಲುವೆ ಸಂ
14.	ಕೇಸರಜವಳಗಾದಿಂದ ಅಳವಾಯಿ ರಸ್ತೆ ಮೇಲೆ ಅಡ್ಡಗಾಲುವೆ ನಿರ್ಮಾಣ	0.35	0.336	1
15.	ಚಂಚನಹಳ್ಳಿ ದಿಂದ ಹಂದಿಕೇರಾ ರಸ್ತೆ ಮೇಲೆ ಅಡ್ಡಗಾಲುವೆ ನಿರ್ಮಾಣ	0.22	0.125	1
16.	ಘನಗೋರಾಳ್ ಹತ್ತಿರ ಅಡ್ಡಗಾಲುವೆ ನಿರ್ಮಾಣ	0.70	0.715	1
	ಒಟ್ಟು	1.27	1.266	3

ಅನುಬಂಧ - 2

	2002-2003 (ಫೆಬ್ರುವರಿ ಅಂತ್ಯದವರೆಗೆ)	ಅಂದಾಜು ಪಟ್ಟಿ (ರೂ. ಲಕ್ಷಗಳಲ್ಲಿ)	ಖರ್ಚಾದ ಹಣ	ನಿರ್ಮಾಣಗೊಂಡ ಹೊಸ ರಸ್ತೆಗಳು (ಕಿ.ಮೀ.ಗಳಲ್ಲಿ)
1.	ಬೊಳೆಗಾಂವ ದಿಂದ ಭಾಟಸಾಂಗರಿ ರಸ್ತೆಗೆ ಮುರಮ ಬೇಸಕೋಟ ಮಾಡುವದು	4.00	-	-

1	2	3	4	5
2.	ಕಪಾಲಾಪೂರದಿಂದ ನಾವದಗಿ ರಸ್ತೆ ನಿರ್ಮಾಣ ಮಾಡುವದು	1.00	0.75	1.00
3.	ತೊಗಲೂರ ಗ್ರಾಮದ ಹತ್ತಿರದ ಸೇತುವೆಯಿಂದ ತೊಗಲೂರ ಗ್ರಾಮದ ವರೆಗೆ ಜಲ್ಲಿ ರಸ್ತೆ ನಿರ್ಮಾಣ	2.00	1.50	0.75
4.	ಮಲ್ಲಾಪೂರ ಮಾಡಿಯಿಂದ ಜಲಸಂಗಿ ರಸ್ತೆ ನಿರ್ಮಾಣ	2.00	1.50	1.00
5.	ಘಾಟಬೋರಾಳ್ ದಿಂದ ಚಾಮನಗರ ರಸ್ತೆ ನಿರ್ಮಾಣ	2.00	1.50	1.00
6.	ಕಸರ ಜೆವಳಗಾಂವ್ ದಿಂದ ರಾಚಪಾಟಗೌಂಡ ಗಾಂವ್‌ವರೆಗೆ ಮುರಮ ಬೇಸಕೋಟ ಮಾಡುವದು	2.50	2.50	0.90
7.	ಹಾಲಹಳ್ಳಿ ಕ್ರಾಸದಿಂದ ಕದಿರಾಬಾದ ವಾಡಿವರೆಗೆ ರಸ್ತೆ ನಿರ್ಮಾಣ	1.50	1.50	1.00
	ಒಟ್ಟು	15.00	9.25	5.65
	ಅಡ್ಡಗಾಲುವೆ ಸಂ			ಅಡ್ಡಗಾಲುವೆ ಸಂ
8.	ಬೇಲೂರಾದಿಂದ ಖಂಡೋಳಾ ರಸ್ತೆಯ ಮೇಲೆ ಅಡ್ಡಗಾಲುವೆ ನಿರ್ಮಾಣ	1.00	-	1
9.	ಹಳ್ಳಿಖೇಡ(ಬಿ) ಗ್ರಾಮದ ಶಾಲೆಯ ಹತ್ತಿರ ಅಡ್ಡಗಾಲುವೆ ನಿರ್ಮಾಣ	0.50	0.50	1
	ಒಟ್ಟು	16.50	9.75	2

ವರ್ಷ	ರಸ್ತೆಗಳು		ಅಡಿಗಾಲುವೆ	
	ಉದ್ದ (ಕಿ.ಮೀ.ಗಳಲ್ಲಿ)	ಮೊತ್ತ (ರೂ. ಲಕ್ಷಗಳಲ್ಲಿ)	ಸಂಖ್ಯೆ	ಮೊತ್ತ (ರೂ. ಲಕ್ಷಗಳಲ್ಲಿ
1. 1999-2000	1.52	03.00	-	-
2. 2001-2002	7.82	14.75	3	1.266
3. 2002-2003	5.65	09.25	2	0.500
ಒಟ್ಟು	14.99	27.00	5	1.766

ಶ್ರೀ ರಾಜೇಂದ್ರ ವರ್ಮ : ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವಂತಹ ಪ್ರಶ್ನೆ ರಸ್ತೆಗಳ ಹಾಗೂ ಸೇತುವೆಗಳ ಬಗ್ಗೆ ಆದರೆ ಸರ್ಕಾರದವರು ರಸ್ತೆ ನಿರ್ಮಾಣದ ಬಗ್ಗೆ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ರಸ್ತೆ ಮತ್ತು ಸೇತುವೆಗಳನ್ನು ನನ್ನ ಕ್ಷೇತ್ರದಲ್ಲಿ ಎಲ್ಲಿ ಮಾಡಿದ್ದಾರೋ ಅದು ನನಗೆ ಗೊತ್ತಿಲ್ಲ. ನಾನು ಪ್ರತ್ಯೇಕವಾಗಿ ನೋಡಿದರೂ ಕೂಡ ಅಲ್ಲಿ ರಸ್ತೆ ನಿರ್ಮಾಣ ಆಗಿಲ್ಲ. ಎರಡನೆಯ ವಿಷಯ ನಾನು ಕೇಳಿರತಕ್ಕಂಥಾದ್ದು ಸೇತುವೆಗಳ ಬಗ್ಗೆ, ಆದರೆ ಮಾನ್ಯ ಸಚಿವರು ಅಡ್ಡಗಾಲುವೆ ಲೆಕ್ಕಪತ್ರವನ್ನು ಕೊಟ್ಟಿದ್ದಾರೆ. ಆದರೆ ಮಾನ್ಯ ಸಚಿವರಿಗೆ ಇದರ ಬಗ್ಗೆ ಸರಿಯಾದ ಮಾಹಿತಿ ಇಲ್ಲವೇನೋ ಎಂದು ನನಗನ್ನಿಸುತ್ತಿದೆ. ಆದಕ್ಕಾಗಿ ದಯವಿಟ್ಟು ಮಾನ್ಯ ಸಚಿವರು ಸ್ಪಷ್ಟವಾಗಿ ಸೇತುವೆಗಳ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದೆ ಬಂದಿದೆಯೋ ಅಥವಾ ಇಲ್ಲವೋ ಎನ್ನುವ ಮಾತನ್ನು ಹೇಳಬೇಕು.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಇದು ಹುಲ್ಯಾನ್ ಮತಕ್ಷೇತ್ರಕ್ಕೆ ಸಂಬಂಧಪಟ್ಟಿದ್ದು, ಇದು ರಸ್ತೆಗಳ ಮೇಲೆ ಪ್ರಶ್ನೆ ಇದೆ. ಎಷ್ಟು ರಸ್ತೆ ಆಗಿದೆ, ಹೊಸ ರಸ್ತೆಗಳು ಎಷ್ಟು ಆಗಿದೆ. ಎನ್ನುವ ಬಗ್ಗೆ ಮಾಹಿತಿಯನ್ನು ನಾನು ಕೊಟ್ಟಿದ್ದೇನೆ. ಮತ್ತಷ್ಟು ಮಾಹಿತಿಯನ್ನು ರಸ್ತೆಗಳ ಬಗ್ಗೆ ಕೊಡಲಿಕ್ಕೂ ನನಗೆ ಸಾಧ್ಯತೆ ಇದೆ. ಸಂಕ್ಷಿಪ್ತವಾಗಿ ಹೇಳಬೇಕಾದರೆ ಬೀದರ್ ಜಿಲ್ಲೆಯಲ್ಲಿ 2011 ಕಿಲೋಮೀಟರ್ ರಸ್ತೆ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟಂತೆ ಇದೆ. ತಮ್ಮ ಕ್ಷೇತ್ರದಲ್ಲಿ 398 ಕಿಲೋ ಮೀಟರ್ ರಸ್ತೆ ಸದ್ಯಕ್ಕೆ ಇದೆ. ಸಣ್ಣ ಪುಟ್ಟ ರಸ್ತೆ ಕೆಲಸ ತಮಗೆ ಗೊತ್ತಿದೆ. ಹೊಸ ರಸ್ತೆಗಳು ಎಂದು ಏನು ಕರೆಯುತ್ತಾರೆ ದೊಡ್ಡ ರಸ್ತೆಗಳು ಅಲ್ಲ ಸಣ್ಣ ಸಣ್ಣ ರಸ್ತೆಗಳು ಇರುತ್ತವೆ. ಅದು ಕಳೆದ ಮೂರು ವರ್ಷಗಳಲ್ಲಿ 15 ಕಿಲೋಮೀಟರ್ ಮಾತ್ರ ಆಗಿದೆ. 34 ಲಕ್ಷ ಖರ್ಚು ಮಾಡಿದ್ದೇವೆ. ಆದರೆ ದಯವಿಟ್ಟು ಇಷ್ಟೇ ಎಂದು ಯಾರೂ ಭಾವಿಸಬಾರದು. ಸಡಕ್ ಯೋಜನೆ ಬೇರೆ ಇದೆ. ಪ್ರಧಾನಮಂತ್ರಿ ಸಡಕ್ ಯೋಜನೆ. ಆ ಸಡಕ್ ಯೋಜನೆ ಅಡಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಈಗಾಗಲೇ 55 ಕಿಲೋ ಮೀಟರ್ ರಸ್ತೆ ಪೂರ್ತಿಯಾಗಿದೆ. 3 ಕೋಟಿ 54 ಲಕ್ಷ ರೂಪಾಯಿ ಖರ್ಚಾಗಿದೆ. ಇನ್ನೊಂದು 67 ಕಿಲೋಮೀಟರ್ ರಸ್ತೆ 6 ಕೋಟಿ ರೂ. ಎಸ್ಟಿಮೇಟ್ ಇರತಕ್ಕಂಥಾದ್ದು, ಮೇ ತಿಂಗಳೊಳಗಾಗಿ ನಾವು ಪೂರೈಸುತ್ತೇವೆ. ಆದಕಾರಣ ತಾವು ರಸ್ತೆ ಬಗ್ಗೆ ಚಿಂತನೆ ಮಾಡುವಾಗ ಬರೀ ಒಂದೇ ಅಲ್ಲ. ಬೇರೆ ಬೇರೆ ಕಾರ್ಯಕ್ರಮದ ಅಡಿಯಲ್ಲಿ ಎಷ್ಟು ತಮ್ಮ ಜಿಲ್ಲೆಯಲ್ಲಿ ಮತ್ತು ತಮ್ಮ ಕ್ಷೇತ್ರದಲ್ಲಿ ರಸ್ತೆಗಳು ಆಗುತ್ತಿದೆ ಇದರ ಬಗ್ಗೆ ತಾವು ಗಮನ ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ರಾಜೇಂದ್ರ ವರ್ಮ : ಮಾನ್ಯ ಅಧ್ಯಕ್ಷರೇ, ಇಲ್ಲಿ ಎರಡನೇ ಪ್ರಶ್ನೆ ಇರುವಂತಥಾದ್ದು ಸೇತುವೆಗಳ ಬಗ್ಗೆ. ನಮ್ಮ ಕ್ಷೇತ್ರದಲ್ಲಿ ಹೆಚ್ಚು ಕಡಿಮೆ ಪ್ರಧಾನ ಮಂತ್ರಿಗಳ ಯೋಜನೆಯಡಿಯಲ್ಲಿ ಆಗಲಿ ಅಥವಾ ನಬಾರ್ಡ್ ಯೋಜನೆಯಲ್ಲಾಗಲಿ, ಶಾಸಕರ ನಿಧಿಯಿಂದ ಆಗಲಿ ನಾವು ಎರಡು ಮಗ್ಗಲಿನ ರಸ್ತೆಗಳನ್ನು ನಿರ್ಮಾಣ ಮಾಡಿ ಇಟ್ಟಿದ್ದೇವೆ. ಈಗ ಮಧ್ಯೆದಲ್ಲಿ ಕಾಲುವೆಗಳಿಗೆ ನಾವು ಸೇತುವೆಗಳನ್ನು ಮಾಡಲಾಗದೇ ಹೋಗುವುದಕ್ಕೆ ಮತ್ತು ಬರುವುದಕ್ಕೆ ಬಸ್ಸುಗಳ ಅನುಕೂಲ ಇಲ್ಲ. ಶಾಲಾ ಮಕ್ಕಳು ಹೋಗುವುದಕ್ಕೆ ಬರುವುದಕ್ಕೆ ಬಹಳ ಅನಾನುಕೂಲ ಆಗುತ್ತಿದೆ. ಇದರ ಬಗ್ಗೆ ಸರ್ಕಾರದಲ್ಲಿ ಮೂರು ವರ್ಷಗಳ ಹಿಂದೆ ನಾಲ್ಕು ಸೇತುವೆಗಳ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆ. ಅದು ಹಣಕಾಸು ಇಲಾಖೆಯಿಂದ ಮೂರು ಸಲ ತಮ್ಮ ಇಲಾಖೆಗೆ ವಾಪಸ್ಸು ಆಗಿದೆ. ದಯವಿಟ್ಟು ಈ ಬಗ್ಗೆ ಹಣಕಾಸು ಯಾವ ಮಟ್ಟದಲ್ಲಿದೆ ಮತ್ತು ಈ ಭಾಗದಲ್ಲಿ ಸೇತುವೆ ನಿರ್ಮಾಣ

ಮಾಡತಕ್ಕಂಥಾದ್ದು ಬಹಳ ಅತಿ ಸಮರ್ಪಕವಾಗಿರುವಂತಾದ್ದು, ನಾವು ಕೋಟಿಗಟ್ಟಲೆ ದುಡ್ಡನ್ನು ಖರ್ಚು ಮಾಡಿ ನಾವು ಡಾಂಬರ್ ರಸ್ತೆ ಮಾಡಿದ್ದೇವೆ ಅದಕ್ಕೆ ಸೇತುವೆ ಇಲ್ಲದಿದ್ದರೆ ಅದು ಸಂಪರ್ಕವಾಗುವುದಿಲ್ಲ ಅದಕ್ಕಾಗಿ ಈ ನಾಲ್ಕು ಸೇತುವೆಗಳ ಬಗ್ಗೆ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ. ಜಳಕಾಪುರ್, ಸೇತುವೆ, ಅಟ್ಟರಗ ಸೇತುವೆ, ಸೆಕೆಡೋಳಗ್ರಾಮದ ಸೇತುವೆ, ಅಮೇಲೆ ಕುಟಗಾ ಗ್ರಾಮದ ಸೇತುವೆ. ಇವುಗಳ ಬಗ್ಗೆ ನೀವು ಏನು ಪರ್ಯಾಯ ವ್ಯವಸ್ಥೆ ಮಾಡುತ್ತಿದ್ದೀರಿ ಎಂದು ನಾನು ಕೇಳುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ನಾನು ಆಗಲೇ ಹೇಳಿದಪ್ರಕಾರ, ಇದು ರಸ್ತೆಗಳಿಗೆ ಸಂಬಂಧಪಟ್ಟ ಪ್ರಶ್ನೆ ಇದೆ. ರಸ್ತೆಗಳ ಬಗ್ಗೆ ಏನೇನು ವಿವರಗಳನ್ನು ಕೊಡುವುದಕ್ಕೆ ಸಾಧ್ಯ. ಆ ವಿವರಗಳನ್ನು ಕೊಟ್ಟಿದ್ದೇವೆ. ಆದರೆ, ಅದು ಉಪಯೋಗವಾಗಬೇಕಾದರೆ, ಹಲವಾರು ಕಲ್ವರ್ಟ್ಸ್ ಬೇಕೆಂದು ಹೇಳುತ್ತಿದ್ದಾರೆ. ಅದರ ಬಗ್ಗೆ ಮಾಹಿತಿಯನ್ನು ಕೊಟ್ಟರೆ, ಆದಷ್ಟು ಬೇಗ ಅದನ್ನೂ ಮಾಡಿಸಲಿಕ್ಕೆ ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ರಾಜೇಂದ್ರ ವರ್ಮ : ನಾನು ಕೇಳಿರುವ ಪ್ರಶ್ನೆಯಲ್ಲಿ ಸೇತುವೆಯೂ ಕೂಡ ಇದೆ. ನಾನು ಕೇಳಿರುವ ಪ್ರಶ್ನೆಯಲ್ಲಿ ಸೇತುವೆ ವಿಷಯವಿಲ್ಲವೆಂಬ ಮಾತನ್ನು ಮಾನ್ಯಮಂತ್ರಿಗಳು ಹೇಳುತ್ತಿದ್ದಾರೆ. ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಇದರ ಬಗ್ಗೆ ಆರ್ ಡಿ ಪಿ ಆರ್ ಸೆಕ್ರಟರಿಯವರ ಹತ್ತಿರ ಮಾಹಿತಿ ಇದೆ. ಸರಿಯಾದ ಮಾಹಿತಿಯನ್ನು ತರಿಸಿಕೊಂಡು, ಅನುಭವವಿರತಕ್ಕ ಮಂತ್ರಿಗಳು ನೇರವಾಗಿ ಸದನದಲ್ಲಿ ಉತ್ತರ ಕೊಡತಕ್ಕಂಥಾದ್ದಕ್ಕೆ ಪ್ರಯತ್ನ ಮಾಡಬೇಕು. ಅದು ಗೊತ್ತಿರಲಾರದೇ ನಮಗೆ ಹೇಳಿ; ನಮ್ಮನ್ನು ತಪ್ಪುದಾರಿಗೆ ಎಳೆಯುವಂಥಾದ್ದು ಆಗುತ್ತದೆ. ಡಾ।। ಮಾಲಕರೆಡ್ಡಿಯವರಿಗೆ ಈ ವಿಚಾರ ಗೊತ್ತಿದೆ. ಅವರು ಜಿಲ್ಲಾ ಉಸ್ತುವಾರಿ ಮಂತ್ರಿಗಳಾಗಿ ಇದ್ದಾಗ, ನಾವು ಅವರಿಗೆ ತೋರಿಸಿದ್ದೇವೆ. ತದನಂತರ ಶ್ರೀ ಬುಳ್ಳಾ ಸುಬ್ಬಾರಾವ್ ರವರು ನೋಡಲ್ ಆಫೀಸರ್ ಇದ್ದಾರೆ, ನಾವು ಅವರಿಗೂ ಸಹ ತೋರಿಸಿದ್ದೇವೆ. ಇದಕ್ಕಿಂತಲೂ ಜಾಸ್ತಿ ಮಾಹಿತಿ ನಾವೇನು ಕೊಡುವುದಕ್ಕಾಗುತ್ತದೆ? ಮೂರೂವರೆ ವರ್ಷದಲ್ಲಿ ನಾವು ಕೋಟಿಗಟ್ಟಲೆ ದುಡ್ಡನ್ನು ಖರ್ಚು ಮಾಡಿ, ಡಾಂಬರು ರಸ್ತೆ ಮಾಡಿದಾಗ, ಅದಕ್ಕೆ ಸಂಪರ್ಕ ಕಲ್ಪಿಸುವುದಕ್ಕಾಗಿ, ಅಲ್ಲಿ ಸೇತುವೆ ಮಾಡಲಿಲ್ಲವೆಂದರೆ, ಅದರ ಅರ್ಥ ಏನಾಗುತ್ತದೆ? ಮಕ್ಕಳು ಶಾಲಾ, ಕಾಲೇಜುಗಳಿಗೆ ಹೋಗಲಿಕ್ಕೆ ಕಷ್ಟವಾಗುತ್ತಿದೆ.

ಶ್ರೀ ಎಂ.ವೈ. ಘೋರ್ಪಡೆ : ಇದರ ಬಗ್ಗೆ ಪ್ರತ್ಯೇಕವಾಗಿ, ಕೇಳಿದ್ದರೆ, ನಾನು ವಿವರಗಳನ್ನು ಕೊಡುತ್ತಾ ಇದ್ದೆ. ಅವರು ವಿವರಗಳನ್ನು ಕಳುಹಿಸಿಕೊಟ್ಟರೆ, ಆ ಬಗ್ಗೆ ನಾನು ತಕ್ಷಣ ನೋಡಿಸುತ್ತೇನೆ.

ಶ್ರೀ ಎ. ನಾಗರಾಜು (ಮಾಲೂರು) : ಪ್ರಧಾನಮಂತ್ರಿಗಳ ಸಡಕ್ ಯೋಜನೆಯಲ್ಲಿ ಹೊಸ ರೋಡುಗಳನ್ನು ಮಾಡಿದ್ದಾರೆ. ಮತ್ತು ನಬಾರ್ಡ್‌ನಲ್ಲೂ ಸಹ ಹೊಸ ರೋಡುಗಳನ್ನು ಮಾಡಿದ್ದಾರೆ. ಜಿಲ್ಲಾ ಪರಿಷತ್ ಹಳೆಯ ರೋಡುಗಳಿವೆಯಲ್ಲಾ ಅವುಗಳಿಗೆ ಸುಮಾರು 15 ವರ್ಷಗಳ ಕೆಳಗೆ ಈ ರಸ್ತೆಗಳಿಗೆ ಡಾಂಬರು ಹಾಕಿರುವುದು. ಅವುಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಲಿಲ್ಲ ಮತ್ತು ಇವತ್ತು ಬಸ್ಸುಗಳು ಹೋಗುವುದಕ್ಕೂ ಬಹಳ ಅನಾನುಕೂಲ ಇದೆ. ಇನ್ನೆರಡು ದಿವಸ ಹೋದರೆ, ಕ್ಷೇತ್ರಗಳಲ್ಲಿ ಶಾಸಕರನ್ನು ಜನ ಅಟ್ಯಾಕ್ ಮಾಡುತ್ತಾರೆ. ಆ

ಸ್ಥಿತಿಯಲ್ಲಿ ಹಳೆಯ ಜಿಲ್ಲಾಪರಿಷತ್ ರೋಡುಗಳು ಇವೆ. ಅವುಗಳಿಗೆ ಏನಾದರೊಂದು ಹೊಸ ಕಾರ್ಯಕ್ರಮ ಮಾಡಬೇಕೆಂದು ಸನ್ಮಾನ್ಯ ಮಂತ್ರಿಗಳಲ್ಲಿ ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ವೈ. ಘೋರ್ಪಡೆ : ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಈ ಸಡಕ್ ಯೋಜನೆ ಏನಿದೆ, ಇದನ್ನು ಕೇಂದ್ರದ ಸಹಾಯದಿಂದ ನಾವು ಮಾಡುತ್ತಿದ್ದೇವೆ. ತಾಂತ್ರಿಕವಾಗಿ ಆ ರಸ್ತೆ ಯಾವ ರೀತಿ ಆಗಬೇಕು, ಅವರು ಒಪ್ಪಿದ ನಂತರವೇ ಅದನ್ನು ಪ್ರಾರಂಭ ಮಾಡುತ್ತೇವೆ. ಮುನ್ನೂರು ಕೋಟಿ ರೂಪಾಯಿ ಕೆಲಸ ಇವತ್ತು ಕರ್ನಾಟಕದಲ್ಲಿ ಈ ಯೋಜನೆ ಅಡಿಯಲ್ಲಿ ನಡೆಯುತ್ತಾ ಇದೆ. ಸುಮಾರು ಒಂದು ನೂರು ಕೋಟಿ ರೂಪಾಯಿ ಕೆಲಸ ಮುಗಿದಿದೆ, ಇನ್ನೂ ಇನ್ನೂರು ಕೋಟಿ ರೂಪಾಯಿ ಕೆಲಸ ಈ ಮೇ ಒಳಗಾಗಿ ಮುಗಿಯಬೇಕಾಗಿದೆ. ಈಗ ನಿರ್ವಹಣೆ ಬಗ್ಗೆ ಹೇಳುವುದಾದರೆ ಅದು ಬೇರೆ ವಿಷಯವಾಗುತ್ತದೆ. ಆದರೆ, ಮಾನ್ಯ ಸದಸ್ಯರ ವಿಚಾರ ಏನಿದೆ, ಅದರ ಬಗ್ಗೆ ನಾನು ಗಮನ ಕೊಡುತ್ತೇನೆ.

ಶ್ರೀ ಎ. ನಾಗರಾಜು : ಅದು ನಿರ್ವಹಣೆಯಲ್ಲಿ ಆಗುವುದಿಲ್ಲ, ಮರು ಡಾಂಬರು ಮಾಡಬೇಕಾಗುತ್ತದೆ.

ಶ್ರೀ ಎಂ.ವೈ. ಘೋರ್ಪಡೆ : ಅಲ್ಲಿ ಮರು ಡಾಂಬರು ಮಾಡುವುದಕ್ಕೆ ಅವಕಾಶ ಇಲ್ಲ. ಮರು ಡಾಂಬರು ಮಾಡಲಿಕ್ಕೆ ಹೋದರೆ, ಕೇಂದ್ರಸರ್ಕಾರದವರು ಒಪ್ಪುವುದಿಲ್ಲ. ಆದಕಾರಣ, ಎಲ್ಲೆಲ್ಲಿ ಮರು ಡಾಂಬರೀಕರಣದ ಅವಶ್ಯಕತೆ ಇದೆ, ಅದು ಬೇರೆ ಕಾರ್ಯಕ್ರಮದಲ್ಲಿ ಮಾಡಿಸಲಿಕ್ಕೆ ಆಗುತ್ತದೆ. ಈ ಸಡಕ್ ಯೋಜನೆಯಲ್ಲಿ ಸ್ವಲ್ಪ ಕಷ್ಟ ಆಗಬಹುದು.

ಶ್ರೀ ಎ. ನಾಗರಾಜು : ಸಡಕ್ ಯೋಜನೆಯಲ್ಲಿ ಅಥವಾ ನಬಾರ್ಡ್ ಯೋಜನೆಯಲ್ಲಿ ಈ ಸ್ಕೀಮ್ ತನ್ನಿ ಎಂದು ನಾನು ಹೇಳಲಿಲ್ಲ. ಇದಕ್ಕೆ ಬೇರೆ ಕಾರ್ಯಕ್ರಮ ಮಾಡಬೇಕಾಗುತ್ತದೆ. ಈ ಸರ್ಕಾರ ಬಂದಾಗ ಮೊದಲು ನೂರು ಲಕ್ಷದ ಕಾರ್ಯಕ್ರಮ ಕೊಟ್ಟರು. ಮೊನ್ನೆ ಬಜೆಟ್‌ನಲ್ಲೂ ಸಹಾ ನೂರು ಲಕ್ಷದ ಕಾರ್ಯಕ್ರಮ ಕೊಡುತ್ತೇವೆಂದು ಪ್ರಕಟ ಮಾಡಿದರು. ಅದು ಇನ್‌ಷಿಯೇಟೇ ಆಗಲಿಲ್ಲ. ಆದರಿಂದ, ಯಾವುದಾದರೊಂದು ಕಾರ್ಯಕ್ರಮ ತರಬೇಕಾಗುತ್ತದೆ. ಇದರ ಬಗ್ಗೆ ಸನ್ಮಾನ್ಯ ಮಂತ್ರಿಗಳು ಹೇಳಬೇಕಾಗುತ್ತದೆ. ಇಲ್ಲದೇ ಹೋದರೆ, ಹಳೆಯ ರೋಡುಗಳಲ್ಲಿ ಬಹಳ ಕಷ್ಟ ಇದೆ. ಇಷ್ಟು ಅಭಿವೃದ್ಧಿ ಮಾಡಿದರೂ ಜನಗಳ ಕಣ್ಣಿಗೆ ಕಾಣುತ್ತಲೇ ಇಲ್ಲ. ಆದ್ದರಿಂದ, ಹಳೆಯ ಜಿಲ್ಲಾ ಪರಿಷತ್ ರೋಡುಗಳಿಗೆ ಒಂದು ಯೋಜನೆ ರೂಪಿಸಬೇಕಾಗುತ್ತದೆ.

ಅಧ್ಯಕ್ಷರು : ಬೇರೆ ಮಾರ್ಗದಲ್ಲಿ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇನೆಂದು ಹೇಳಿದರಲ್ಲಾ.

ಶ್ರೀ ಪ್ರಕಾಶ್ ಖಂಡ್ರೆ : ಜಿಲ್ಲಾಪಂಚಾಯ್ತಿ ರಸ್ತೆಗಳು ಮೂರು ವರ್ಷಗಳಿಂದ (ಡಾಂಬರೀಕರಣದ ರಸ್ತೆಗಳು) ನಿರ್ವಹಣೆ ಮಾಡುವುದಕ್ಕಾಗುತ್ತಾ ಇಲ್ಲ, ಅಷ್ಟು ರೋಡುಗಳು ನಮ್ಮ ಬೀದರ್ ಜಿಲ್ಲೆಯಲ್ಲಿದ್ದು, ಅವೆಲ್ಲವೂ ಕೆಟ್ಟು ಹೋಗಿವೆ. ನಾನು ಪ್ರತಿ ಸಲವೂ ಪ್ರಶ್ನೆ ಕೇಳುತ್ತಾ ಇದ್ದೇನೆ. ಆದರೆ, ಈ ಪ್ರಶ್ನೆ ಸದನದಲ್ಲಿ ಉತ್ತರಿಸುವ ಪಟ್ಟಿಯಲ್ಲಿ ಇಲ್ಲಾ, ಲಿಖಿತ ಮೂಲಕ ಕೇಳುವ ರೂಪದಲ್ಲಿ ಬರುತ್ತಾ ಇದೆ. ತಾವು, ಈ ಬಗ್ಗೆ ಪ್ರಶ್ನೆ ಕೇಳಲು ಒಂದು ಚಾನ್ಸ್ ಕೊಟ್ಟರೆ, ತಮಗೆ ಧನ್ಯವಾದ ಕೊಡುತ್ತೇನೆ. ಈ ಪ್ರಶ್ನೆಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಕಳೆದ ಮೂರು ವರ್ಷಗಳಿಂದ ಡಾಂಬರು ಮಾಡಿದ ರೋಡುಗಳಿಗೆ ನಿರ್ವಹಣೆಯೇ ಇಲ್ಲ. ನಿರ್ವಹಣೆ ಮಾಡದೇ ಹೋದರೆ ರಸ್ತೆಗಳು ಯಾವರೀತಿ ಇರುತ್ತದೆ? ಪಿ.ಡಬ್ಲ್ಯು.ಡಿ. ಡಿಪಾರ್ಟ್‌ಮೆಂಟಿಗೆ

ನಿರ್ವಹಣೆ ಇದೆ. ಆದರೆ, ಜಿಲ್ಲಾ ಪಂಚಾಯ್ತಿ ರೋಡುಗಳಿಗೆ ನಿರ್ವಹಣೆಯೇ ಇಲ್ಲ. ಇದ್ದಂಥ ರೋಡು ಅಷ್ಟೂ ಕೆಟ್ಟು ಹೋಗುತ್ತಿವೆ. ಇದಕ್ಕೇನಾದರೂ ನೀವು ಸ್ಪೆಷಲ್ ಗ್ರಾಂಟ್ ಕೊಟ್ಟು ಈ ರೋಡ್ ನಿರ್ವಹಣೆ ಮಾಡಿದರೆ, ಈ ರಸ್ತೆಗಳು ಉಳಿಯುತ್ತವೆ.

ಅಧ್ಯಕ್ಷರು : ಜಿಲ್ಲಾ ಪರಿಷತ್ ರಸ್ತೆಗಳಿಗೆ ನಿರ್ವಹಣೆಯೇ ಇಲ್ಲ, ದಯವಿಟ್ಟು ಅದಕ್ಕೆ ಏನಾದರೂ ಏರ್ಪಾಡು ಮಾಡಿ ಎಂದು ಮಾನ್ಯ ಸದಸ್ಯರುಗಳು ಕೇಳುತ್ತಾರೆ. ಎಲ್ಲಾ ಸದಸ್ಯರ ಅಭಿಪ್ರಾಯವೂ ಅಷ್ಟೇ, ನನ್ನದೂ ಅಷ್ಟೆ.

ಗೊಂದಲ

ಅಧ್ಯಕ್ಷರು : ಮಾನ್ಯ ಸಚಿವರಿಗೆ ಸಮಯ ಕೊಟ್ಟರೆ, ಅವರು ಉತ್ತರ ಕೊಡುತ್ತಾರೆ. ಒಂದೇ ಸಾರಿ 5-6 ಜನ ಎದ್ದು ನಿಂತರೆ ಹೇಗೆ?

ಶ್ರೀ ಪ್ರಕಾಶ್ ಖಂಡ್ರೆ : ನಾವು ಇನ್ನು ಒಂದೆರಡು ವರ್ಷ ಇದೇರೀತಿ ಕಾಲಾಹರಣ ಮಾಡಿದರೆ ಜಿಲ್ಲಾ ಪರಿಷತ್ತು ಡಾಂಬರೀಕರಣ ಮಾಡಿದ ರೋಡುಗಲೇ ಸಿಗುವುದಿಲ್ಲ.

ಅಧ್ಯಕ್ಷರು : ಜಿಲ್ಲಾ ಪಂಚಾಯ್ತಿ ರಸ್ತೆಗಳ ಬಗ್ಗೆ ನಿರ್ವಹಣೆಯೇ ಇಲ್ಲ. ಎಲ್ಲವೂ ಹಾಳಾಗಿ ಹೋಗಿವೆ. ಶ್ರೀಮಾನ್ ನಾಗರಾಜುರವರು ಹೇಳಿದಹಾಗೆ ಇನ್ನು ಕೆಲವು ದಿವಸ ಹೋದರೆ ಜನ ನಮ್ಮನ್ನು ಅಟ್ಯಾಕ್ ಮಾಡುತ್ತಾರೆ.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ನಿರ್ವಹಣೆ ಬಗ್ಗೆ ನಾವು ಹೆಚ್ಚಿನ ಲಕ್ಷ್ಯ ಕೊಡತಕ್ಕ ಅವಶ್ಯಕತೆ ಇದೆ, ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಜಿಲ್ಲಾ ಪಂಚಾಯ್ತಿ ರಸ್ತೆಗಳು ನಮ್ಮ ರಾಜ್ಯದಲ್ಲಿ ಒಂದು ಲಕ್ಷ ಕಿಲೋಮೀಟರ್ ಮೇಲ್ಪಟ್ಟು ಇದೆ. ಅದರಲ್ಲಿ ಡಾಂಬರೀಕರಣ ಆಗಿರುವಂತ್ತಾದು 23 ಸಾವಿರ ಕಿಲೋಮೀಟರ್ ಇದೆ. ಇದಕ್ಕೆ ನಿರ್ವಹಣೆ ಮಾಡಲಿಕ್ಕೆ ಇರತಕ್ಕ ಹಣ ಸಾಲುವುದಿಲ್ಲ. ನಾನಾದರೂ ಒಪ್ಪುತ್ತೇನೆ. ಎಷ್ಟೋ ಸಲ ಚರ್ಚೆಯಲ್ಲಿ ಈ ಮಾತನ್ನು ಹೇಳಿದ್ದೇನೆ. ನಿರ್ವಹಣೆ ಸರಿಯಾಗಿ ಆಗಬೇಕಾದರೆ, ರಾಜ್ಯಮಟ್ಟದ ರಸ್ತೆಗಳನ್ನು ಯಾವರೀತಿ ನಿರ್ವಹಣೆ ಮಾಡುತ್ತಾರೆ, ಅದೇ ಒಂದು ನಾರಮ್ಸ್‌ನ್ನು ಜಿಲ್ಲಾ ಪಂಚಾಯ್ತಿ ರಸ್ತೆಗಳಿಗೆ ಅನುಸರಿಸಬೇಕು. ಅದು ಆಗುವವರೆಗೂ ಸ್ವಲ್ಪ ಈ ದಿಸೆಯಲ್ಲಿ ಅಭಾವ ಇದೆ, ತೊಂದರೆ ಇದೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು : ಹಾಗಾದರೆ ಒಂದು ಕಾನೂನು ಮಾಡಿ. ನಾನ್ ಪ್ಲಾನ್ ಅಮೌಂಟ್ ಏನಿದೆ, ಅದರಲ್ಲಿ ನಿರ್ವಹಣೆಗೆ ಹಾಕಿ.

ಶ್ರೀ ಪ್ರಕಾಶ್ ಖಂಡ್ರೆ : ಮಾನ್ಯ ಅಧ್ಯಕ್ಷರೇ, ಬಜೆಟ್‌ನಲ್ಲಿ ಏನಾದರೂ ಪ್ರಾವಿಷನ್ ಮಾಡಿಕೊಳ್ಳಬೇಕಲ್ಲ.

ಗೊಂದಲ

ಅಧ್ಯಕ್ಷರು : ನಿಮ್ಮ ಪರವಾಗಿ ನಾನೇ ಮಾತನಾಡುತ್ತಿದ್ದೇನೆ. ನೀವೇಕೆ ಅಷ್ಟು ಜನ ಮಾತನಾಡುತ್ತೀರಿ?

ಗೊಂದಲ

ಅಧ್ಯಕ್ಷರು : ಅವರು ಏನೇ ಮಾತನಾಡಿಕೊಳ್ಳಲಿ, ಅದನ್ನು ಸಭೆಯ ರೆಕಾರ್ಡ್‌ಗೆ ತೆಗೆದುಕೊಳ್ಳಬೇಡಿ. ಯಾವುದನ್ನೂ ಬರೆದುಕೊಳ್ಳಬೇಡಿ. ತಮ್ಮ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ನಾನೇ ಹೇಳಿರುವಾಗ, ಏಕೆ ಎಲ್ಲರೂ ಒಂದೇಸಲ ಎದ್ದು ನಿಂತುಕೊಳ್ಳುತ್ತೀರಿ.

ಗೊಂದಲ

ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ರೆಕಾರ್ಡ್ ಮಾಡಿರುವುದಿಲ್ಲ.

ಅಧ್ಯಕ್ಷರು : ಯಾವುದನ್ನೂ ಬರೆದುಕೊಳ್ಳಬೇಡಿ. ಈಗ ವಿರೋಧ ಪಕ್ಷದ ನಾಯಕರು ಪ್ರಶ್ನೆ ಕೇಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಯಾವ ರೀತಿ ರಾಜ್ಯ ಹೆದ್ದಾರಿಗಳನ್ನು ಮಾಡುತ್ತಿದ್ದೀರಿ ಮತ್ತು ಬೇರೆ ಬೇರೆ ರಸ್ತೆಗಳನ್ನು ಇವತ್ತು ರಾಜ್ಯಸರ್ಕಾರದಿಂದ ಮಾಡುತ್ತಿದ್ದೀರಿ, ಅದೇರೀತಿ ಇದಕ್ಕೂ ಒಂದು ಪ್ರಾವಿಷನ್ ಮಾಡಿ. ಹಣದ ಅಭಾವ ಇದೆಯೆಂದು ಹೇಳುತ್ತೀರಿ. ಜಿಲ್ಲಾ ಪಂಚಾಯ್ತಿಗಳಿಗೆ ನಿರ್ವಹಣೆ ಮಾಡಲಿಕ್ಕಾಗುತ್ತಿಲ್ಲವೆಂದು ಹೇಳುತ್ತೀರಿ, ನೀವು ಎಲ್ಲವನ್ನೂ ಒಪ್ಪಿಕೊಳ್ಳುತ್ತೀರಿ. ಅಸಹಾಯಕತೆಯನ್ನು ಒಪ್ಪಿಕೊಳ್ಳುತ್ತಿದ್ದೀರಿ. ಆದರೆ, ಇದಕ್ಕೆ ಪರಿಹಾರ ಏನು? ಜಿಲ್ಲಾ ಪರಿಷತ್ ರಸ್ತೆಗಳು ಹೀಗೆಯೇ ಇರಬೇಕೇ ಹೇಗೆ?

ಗೊಂದಲ

ಅಧ್ಯಕ್ಷರು : ನೀವು ನಾಲ್ಕು ಜನ ಒಂದೇಸಲ ಎದ್ದುನಿಂತು ಮಾತನಾಡಿದರೆ, ಇಲ್ಲಿ ಬರೆದುಕೊಳ್ಳುವುದಿಲ್ಲ. ನಾನು ಮಾನ್ಯ ಸಚಿವರಾದ ಫೋರ್ಪಡೆಯವರಿಗೆ ಅನುಮತಿ ಕೊಟ್ಟಿದ್ದೇನೆ, ಅವರು ಮಾತನಾಡುತ್ತಾರೆ.

ಶ್ರೀ ಎಂ.ವೈ. ಘೋರ್ಪಡೆ : ನಾನು ಈ ವಿಷಯವನ್ನು ಮುಚ್ಚಿಡುವುದಕ್ಕೆ ಪ್ರಯತ್ನ ಮಾಡಿಲ್ಲ. ನಮಗೆ ಈ ನಿರ್ವಹಣೆಗಾಗಿ 71 ಕೋಟಿ ರೂಪಾಯಿಗಳು ಇದೆ, ಸರಿಯಾಗಿ ನಿರ್ವಹಣೆ ಮಾಡಬೇಕಾದರೆ 150 ಕೋಟಿ ಬೇಕು. ಇದರ ಬಗ್ಗೆ ಮುಚ್ಚುಮರೆ ಮಾಡತಕ್ಕ ಅವಶ್ಯಕತೆ ಇಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಈ 71 ಕೋಟಿ ರೂ. ಹಣವೂ ಬಿಡುಗಡೆಯಾಗಿರುವುದಿಲ್ಲ.

12.00 ಪಿಎಂ

ಶ್ರೀ ಎಂ.ವೈ. ಘೋರ್ಪಡೆ : 48 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆ. ಆಗಿಲ್ಲವೆಂದು ಅಲ್ಲ. ಆದರೆ ಅದು ಸಾಲದು.

ಗೊಂದಲ

ಅಧ್ಯಕ್ಷರು : ಮಾನ್ಯ ಘೋರ್ಪಡೆಯವರೇ, ದಯವಿಟ್ಟು ಈ ವಿಚಾರವನ್ನು ಸ್ವಲ್ಪ ಸೀರಿಯಸ್ ಆಗಿ ತೊಗೆದುಕೊಳ್ಳಿ. ಜಿಲ್ಲಾ ಪರಿಷತ್ ರಸ್ತೆಗಳ ಮೈಂಟೇನೆನ್ಸ್‌ಗೆ ಆದಷ್ಟು ಬೇಗ ಒಂದು ವಿಪ್ಪಾಟನ್ನು ಮಾಡಿ. ಇಲ್ಲವಾದಲ್ಲಿ ಮಾನ್ಯ ಸದಸ್ಯರಾದ ಶ್ರೀ ನಾಗರಾಜ ರು ಹೇಳಿದ ಹಾಗೆ ಕೆಲವೇ ದಿವಸಗಳಲ್ಲಿ ಜನರು ನಮ್ಮನ್ನು ಅಟ್ಯಾಕ್ ಮಾಡುತ್ತಾರೆ. ದ ಟ್ಟು ಮಾನ್ಯ ಸದಸ್ಯರುಗಳು ಮಾನ್ಯ ಮಂತ್ರಿಯವರು ಉತ್ತರ ಹೇಳುವಾಗ ಕುಳಿತುಕೊಳ್ಳಬೇಕು.

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಸತ್ಯವಾದಂಥ ಉತ್ತರವನ್ನು ಹೇಳಬೇಕಾಗುತ್ತದೆ ಇದು ಎಲ್ಲರಿಗೂ ಸಂಬಂಧಪಟ್ಟ ಪ್ರಶ್ನೆಯಾಗಿದೆ. ರಸ್ತೆಗಳ ಮೈಂಟೇನೆನ್ಸ್ ಕಡಿಮೆ ಇದೆ ಎಂಬುದನ್ನು ನಾನು ಬಹಿರಂಗವಾಗಿ ಒಪ್ಪುತ್ತೇನೆ. ಅದಕ್ಕೆ ನಾವು ಏನು ಮಾಡಬೇಕೆಂಬುದರ ಬಗ್ಗೆ ಚಿಂತನೆ ಮಾಡಬೇಕು. ತಮಗೆ ಗೊತ್ತಿರುವ ಹಾಗೆ ಪಿಡಬ್ಲ್ಯೂಡಿ

ರಸ್ತೆಗಳು ರಾಜ್ಯದಲ್ಲಿ 30,000 ಕಿಲೋಮೀಟರ್ ಗಳಷ್ಟು ಇರಬಹುದು. ಅದಕ್ಕೆ ಮೂರು ಪಟ್ಟು ರಸ್ತೆಗಳು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿದೆ. ಅದನ್ನೂ ಅದೇ ಜನರು ಉಪಯೋಗಿಸುತ್ತಾರೆ. ಆದಕಾರಣ ನಾನು ಎಷ್ಟೋ ಸಾರಿ ಸಲಹೆಯನ್ನು ಮಾಡಿದ್ದೇನೆ. ಸಚಿವಸಂಪುಟದಲ್ಲಿಯೂ ಕೂಡ ಹೇಳಿದ್ದೇನೆ. ಒಂದು ಯೂನಿಫಾರ್ಮ್ ಮೈಂಟೇನೆನ್ಸ್ ಪಾಲಿಸಿ ಈ ರಾಜ್ಯಕ್ಕೆ ಬೇಕಾಗಿದೆ. ರಸ್ತೆಗಳು ಪಿ.ಡಬ್ಲ್ಯೂ.ಡಿ ಹೆಸರಲ್ಲಿಯೇ ಇರಲಿ, ಜಿಲ್ಲಾಪಂಚಾಯತ್ ಹೆಸರಲ್ಲಿಯೇ ಇರಲಿ, ಒಟ್ಟಿನಲ್ಲಿ ಡಾಂಬರ್ ರಸ್ತೆ ಅಂದರೆ ಡಾಂಬರ್ ರಸ್ತೆ. ಅದರಲ್ಲಿ ನಾವು ವ್ಯತ್ಯಾಸ ಮಾಡಲು ಬರುವುದಿಲ್ಲ. ಅದಕ್ಕಾಗಿ ಒಂದು ಯೂನಿಫಾರ್ಮ್ ಪಾಲಿಸಿಯನ್ನು ತರಬೇಕು. ಕೇಂದ್ರ ಸರಕಾರಕ್ಕೂ ಕೂಡ ಇದರಲ್ಲಿ ಆಸಕ್ತಿ ಇದೆ. ಕೇಂದ್ರದವರು ರಸ್ತೆಗಳನ್ನು ನಿರ್ಮಿಸುವುದಕ್ಕೆ ಕೋಟಿಗಟ್ಟಲೆ ಹಣವನ್ನು ಅವರು ಕೊಡುತ್ತಾ ಇದ್ದಾರೆ. ಅದನ್ನು ನಾವು ಮೈಂಟೇನ್ ಮಾಡದಿದ್ದರೆ ಹೇಗೆ ಎಂಬ ಕಾಳಜಿ ಅವರಿಗೂ ಇದೆ .....

ಗೊಂದಲ

ಮಾನ್ಯ ಸದಸ್ಯರು : ನಮ್ಮ ಪ್ರಶ್ನೆಯನ್ನೆ ಅರ್ಥ ಮಾಡಿಕೊಂಡಿಲ್ಲ.

ಅಧ್ಯಕ್ಷರು : ಮಾನ್ಯ ಮಂತ್ರಿಯವರು ಉತ್ತರಿಸುವಾಗ ಮಾನ್ಯ ಸದಸ್ಯರುಗಳಿಗೆ ಮಾತನಾಡಲು ಅಲೋ ಮಾಡುವುದಿಲ್ಲ. ದಯವಿಟ್ಟು ತಾವೆಲ್ಲರೂ ಕುಳಿತುಕೊಳ್ಳಬೇಕು.

ಗೊಂದಲ

ಶ್ರೀ ಎಂ.ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ ಅದಕ್ಕೆ ಒಂದು ರಿವಾಲ್ವಿಂಗ್ ಫಂಡ್‌ನ್ನು ಮಾಡಬೇಕೆಂದು ಸಲಹೆ ಮಾಡಿದ್ದೀರಿ ಅದು ಬಹಳ ಸ್ವಾಗತಾರ್ಹವಾಗಿದೆ. ಹಾಗೆ ಒಂದು ಫಂಡ್‌ನ್ನು ಮಾಡಿದರೆ ಅದಕ್ಕೆ ಕೇಂದ್ರ ಸರಕಾರದವರೂ ಕೂಡ ಸಹಾಯ ಮಾಡಲು ಸಾಧ್ಯವಿದೆ. ಅದರ ಬಗ್ಗೆ ಇಲ್ಲಿ ಒತ್ತಾಯಗಳು ಬರಲಿ. ಈ ರಸ್ತೆಗಳು ಕೇಂದ್ರ ಮತ್ತು ರಾಜ್ಯಗಳು ಸೇರಿ ಕಟ್ಟಿರತಕ್ಕಂಥ ರಸ್ತೆಗಳಾಗಿವೆ. ನಾವು ಅದನ್ನು ಮೈಂಟೇನ್ ಮಾಡಬೇಕು. ಇಲ್ಲವಾದಲ್ಲಿ ಅವುಗಳು ಹಾಳಾಗುತ್ತವೆ. ಅದಕ್ಕೆ ಒಂದು ಫಂಡ್ ಇರಲೇ ಬೇಕು. ಆ ಫಂಡ್‌ನ ಮೂಲಕ ಸಾಕಷ್ಟು ಪ್ರಮಾಣದಲ್ಲಿ ಮೈಂಟೇನೆನ್ಸ್ ಮಾಡಲು ಸಾಧ್ಯವಾಗಬೇಕು. ಈ ದಿಶೆಯಲ್ಲಿ ನಾವೆಲ್ಲರೂ, ಅಂದರೆ ರಾಜ್ಯ ಸರಕಾರವಾಗಲೀ, ಕೇಂದ್ರ ಸರಕಾರವಾಗಲೀ, ಜಿಲ್ಲಾ ಪರಿಷತ್ ಆಗಲೀ, ಯೋಚನೆ ಮಾಡುವುದು ಸೂಕ್ತ.

ಅಧ್ಯಕ್ಷರು : ಮುಂದಿನ ಪ್ರಶ್ನೆ ... ಶ್ರೀ ಬೆಳ್ಳುಬ್ಬಿಯವರು ... ಅವರು ಸಭೆಯಲ್ಲಿ ಇಲ್ಲ ... ಅವರಾದ ಮೇಲೆ ಶ್ರೀ ಜ್ಞಾನೇಂದ್ರರವರು ... ನಿಮ್ಮ ಪ್ರಶ್ನೆ ಪ್ರಾಥಮಿಕ ಶಿಕ್ಷಣದಿಂದ ಪ್ರೌಢಶಿಕ್ಷಣಕ್ಕೆ ವರ್ಗಾಯಿಸಲಾಗಿದೆ. ಅದನ್ನು ಇನ್ನೊಂದು ಸಲ ತೆಗೆದುಕೊಳ್ಳೋಣ.. (ಚು.ಗು.ಪ್ರ. ನಂ. 48(523ನ್ನು ವರ್ಗಾಯಿಸಲಾಗಿದೆ)

ಗೊಂದಲ

ಅಧ್ಯಕ್ಷರು : ಮಾನ್ಯ ಬೆಳ್ಳುಬ್ಬಿಯವರೇ ನಾನು ಮೂರು ಸಲ ನಿಮ್ಮ ಹೆಸರು ಹೇಳಿದಾಗಲೂ ತಾವು ಪ್ರಶ್ನೆಯನ್ನು ಕೇಳಿಲ್ಲ. ಈಗ ಕೇಳಿ.... ಇಲ್ಲದಿದ್ದರೆ ಲ್ಯಾಪ್ಸ್ ಆಗುತ್ತದೆ.

ಬಿಜಾಪುರ ಜಿಲ್ಲೆಯಲ್ಲಿ ತಡೆಹಿಡಿದಿರುವ ಶಿಕ್ಷಕರ ವೇತನ ಮಂಜೂರು

45(487) - ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?